

# ದೀದಿಗೆ ಯಾಕಿಷ್ಟು ಸಿಟ್ಟು?

■ ರಾಹುಲ ಬೆಳಗಲಿ

‘ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಎಐಟಿಸಿ) ಪಕ್ಷವು ಮೃದು ಮಣ್ಣಿನಿಂದ ಕಟ್ಟಲ್ಪಟ್ಟಿದೆ ಎಂದು ಹಲವರು ತಿಳಿದಿದ್ದಾರೆ. ಇಲಿಗಳು ಕೆರೆದರೆ ಸಾಕು ಎಲ್ಲವೂ ಕುಸಿದು ಬೀಳುತ್ತೆ ಎಂಬ ಭಾವನೆ ಅವರದ್ದು. ಆದರೆ, ನಾವು ಹುಲಿಗಳೊಂದಿಗೆ ಕದನಕ್ಕೆ ಇಳಿಯುವವರು. ಇಲಿಗೆಲ್ಲ ಹೆದರುವವರು ಅಲ್ಲ. ನೆನಪಿರಲಿ’.

‘ಬಹಳಷ್ಟು ಜನರಿಗೆ ಪೇಪರ್ ಟೈಗರ್ ಮತ್ತು ರಾಯಲ್ ಬೆಂಗಾಲ್ ಟೈಗರ್ ನಡುವಿನ ವ್ಯತ್ಯಾಸ ಗೊತ್ತಿಲ್ಲ. ಅದು ಸ್ಪಷ್ಟವಾಗಿ ಅರ್ಥವಾದರೆ, ಪಶ್ಚಿಮ ಬಂಗಾಳದಲ್ಲಿ ಯಾರು ವಾಸವಿದ್ದಾರೆ ಮತ್ತು ಅವರ ಹಿನ್ನೆಲೆಯೇನು ಎಂಬುದು ಗೊತ್ತಾಗುತ್ತದೆ. ಇಲ್ಲಸಲ್ಲದ ಆರೋಪಗಳು ಮಾಡುವ ಮುನ್ನ ಎಚ್ಚರವಿರಲಿ’.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೀಗೆ ಮಾತುಗಳನ್ನು ಆಡತೊಡಗಿದರೆ, ಗುಡುಗು ಮತ್ತು ಮಿಂಚು ಸಹಿತ ಆರ್ಭಟದ ಮಳೆ ಶುರುವಾಯಿತೆಂದೇ ಅರ್ಥ. ಬಹುತೇಕ ಜನರ ಪಾಲಿಗೆ ‘ಮಮತಾ ದೀದಿ’ ಆಗಿರುವ ಅವರು ಆ ರಾಜ್ಯದ ಮೊದಲ ಮಹಿಳಾ ಮುಖ್ಯಮಂತ್ರಿಯು ಹೌದು.

‘ಅಶಾಂತ ವ್ಯಕ್ತಿತ್ವ’ವನ್ನೇ ರೂಪಿಸಿಕೊಂಡಂತೆ ಮತ್ತು ಅದನ್ನೇ ಜೀವನದುದ್ದಕ್ಕೂ ರೂಢಿಸಿಕೊಂಡಂತೆ ಇರುವ ಮಮತಾ ಅವರು ಬರಹಗಾರ್ತಿಯೂ ಹೌದು. 15ನೇ ವಯಸ್ಸಿನಲ್ಲೇ ಸಾಮಾನ್ಯ ಕಾರ್ಯಕರ್ತೆಯಾಗಿ ರಾಜಕೀಯ ಕ್ಷೇತ್ರಕ್ಕೆ ಧುಮುಕಿದ ಅವರು ಮಾಡಿದ ಸಾಹಸಗಳು ಒಂದೆರಡಲ್ಲ. ಆರಂಭಿಕ ದಿನಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಆಡಳಿತ ವಿರುದ್ಧ ನಿರಂತರ ಹೋರಾಟ ನಡೆಸಿದ ಅವರು, ಸುಭದ್ರವಾದ ಕೆಂಪು ಕೋಟೆ ದುರ್ಬಲಗೊಂಡು ಕುಸಿಯುವವರೆಗೆ ವಿಶ್ರಮಿಸಲಿಲ್ಲ. ಈಗ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತ ಮತ್ತೆ ಸುದ್ದಿಯಲ್ಲಿದ್ದಾರೆ.

1955ರ ಜನವರಿ 5ರಂದು ಕೋಲ್ಕತ್ತದಲ್ಲಿ ಬಡ ಕುಟುಂಬದಲ್ಲಿ ಜನಿಸಿದ ಮಮತಾ 17ನೇ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡರು. ಹಲವು ಸಂಕಷ್ಟಗಳ ಮಧ್ಯೆಯೇ ಶಾಲಾ–ಕಾಲೇಜು ಶಿಕ್ಷಣ ಪೂರ್ಣಗೊಳಿಸಿದರು. ಇಸ್ಲಾಂ ಇತಿಹಾಸದ ಕುರಿತು ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಗಳಿಸಿದರು. ಜೊತೆಗೆ ಕಾನೂನು ಶಿಕ್ಷಣವನ್ನೂ ಪಡೆದರು. ಹೋರಾಟ ಮನಸ್ಥಿತಿಯ ಮಮತಾ ಅವರು ಜೋಗಮಯ ದೇವಿ ಕಾಲೇಜಿನಲ್ಲಿ ಓದುವಾಗಲೇ ಕಾಂಗ್ರೆಸ್ (ಐ) ಪಕ್ಷದ ವಿದ್ಯಾರ್ಥಿ ಘಟಕವಾದ ಛಾತ್ರ ಪರಿಷತ್ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಅಲ್ಲಿ ಭದ್ರವಾಗಿ ಬೇರೂರಿದ್ದ ಎಡ ಪಕ್ಷಗಳು ಮತ್ತು ಸಂಘಟನೆಗಳಿಗೆ ಮಣಿಸುವ ಕಾರ್ಯದಲ್ಲಿ ನಿರತರಾದರು.

1970ರಿಂದ ಕಾಂಗ್ರೆಸ್ ಕಾರ್ಯಕರ್ತೆಯಾಗಿ ಗುರುತಿಸಿಕೊಂಡ ಮಮತಾ ಯಾವ ಪರಿ ಗಟ್ಟಿಗಿತ್ತಿಯೆಂದರೆ, ಪ್ರತಿಭಟನೆ ವೇಳೆ ‘ಲೋಕನಾಯಕ’ ಜಯಪ್ರಕಾಶ್ ನಾರಾಯಣ ಅವರ ಕಾರಿನ ಮೇಲೆ ನಿಂತು ಆಕ್ರೋಶ ವ್ಯಕ್ತಪಡಿಸಿದ್ದರು. 1984ರಲ್ಲಿ ಜಾಧವಪುರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಆಗಿನ ಕಮ್ಯುನಿಸ್ಟ್ ನೇತಾರ ಸೋಮನಾಥ ಚಟರ್ಜಿ ಅವರನ್ನು ಪರಾಭವಗೊಳಿಸಿದ್ದರು. 29ನೇ ವಯಸ್ಸಿನಲ್ಲೇ ಸಂಸತ್ತು ಪ್ರವೇಶಿಸಿದ್ದರು.

ಆಯಾ ಕಾಲಘಟ್ಟದಲ್ಲಿ ಕಾಂಗ್ರೆಸ್‌ನ ಯುಪಿಎ ಮೈತ್ರಿಕೂಟ ಮತ್ತು ಬಿಜೆಪಿಯ ಎನ್‌ಡಿಎ ಮೈತ್ರಿಕೂಟದೊಂದಿಗೆ ಗುರುತಿಸಿಕೊಂಡ ಅವರು ಕೇಂದ್ರ ಮಾನವ ಸಂಪನ್ಮೂಲ, ರೈಲ್ವೆ ಸೇರಿ ವಿವಿಧ ಖಾತೆಗಳನ್ನು ನಿಭಾಯಿಸಿದರು. ಕಾಂಗ್ರೆಸ್‌ನ ರಾಜ್ಯ ನಾಯಕರ ಬಗ್ಗೆ ಸಿಟ್ಟಿಗೆದ್ದು 1998ರಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷ ಸ್ಥಾಪಿಸಿದರು. 2011ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಬಹುಮತ ಗಳಿಸಿ, ಮಮತಾ ಮುಖ್ಯಮಂತ್ರಿಯಾದರು. ಅಲ್ಲಿಂದ ಮತ್ತೆ ಹಿಂದಿರುಗಿ ನೋಡದ ಅವರು 16 ವರ್ಷಗಳಿಂದ ಮುಖ್ಯಮಂತ್ರಿಯಾಗಿದ್ದಾರೆ. 1977 ರಿಂದ 2011ರವರೆಗೆ ದಾಖಲೆ ಅವಧಿ ಅಧಿಕಾರದಲ್ಲಿದ್ದ ಸಿಪಿಐ (ಎಂ) ಪಕ್ಷಕ್ಕೆ ಪುನಃ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ.

ಸರಳ ಬದುಕನ್ನು ರೂಢಿಸಿಕೊಂಡಿರುವ ಮಮತಾ ಅವರು ಹೆಚ್ಚಿನ ಸಮಯ ಶ್ವೇತ ಬಣ್ಣದ ಸೀರೆ ತೊಡುತ್ತಾರೆ. ಓಡಾಡಲು ಹವಾಯಿ ಚಪ್ಪಲಿಗಳನ್ನು ನೆಚ್ಚಿಕೊಂಡಿದ್ದಾರೆ. ನಿರಾಸೆಯ ಛಾಯೆಯನ್ನು ಹತ್ತಿರಕ್ಕೂ ಬಾರದಂತೆ ನೋಡಿಕೊಳ್ಳುವ ಅವರು, ಸದಾ ಹಸನ್ಮುಖಿಯಾಗಿ ಇರಲು ಇಷ್ಟಪಡುತ್ತಾರೆ. ಯಾವ ಪರಿ ಉತ್ಸಾಹಿಯೆಂದರೆ, ಕಾಲಿಗೆ ಗಾಯಗೊಂಡು ಗಾಲಿ ಕುರ್ಚಿಯಲ್ಲಿ ಕೂತಾಗಲೂ ‘ಫುಟ್‌ಬಾಲ್ ಆಡುತ್ತೇನೆ. ಸೋಲು ಒಪ್ಪುವುದಿಲ್ಲ’ ಎಂದಿದ್ದರು.

ಮಮತಾ ಅವರು ಬರೀ ಭಾಷಣ ಮತ್ತು ಹೋರಾಟಗಳಿಗೆ ಸೀಮಿತವಾಗಿಲ್ಲ. ಅವರು 12ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಕಥೆ ಮತ್ತು ಕವನಗಳನ್ನು ಬರೆಯುತ್ತಾರೆ. ವಿವಿಧ ವಿಷಯಗಳನ್ನು ಆಧರಿಸಿದ ಅವರ ಬಹುತೇಕ ಕೃತಿಗಳು ಕೋಲ್ಕತ್ತ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಬಿಡುಗಡೆಯಾಗಿವೆ. ಅವರ ಆತ್ಮಕಥನ ‘ಮೈ ಅನ್‌ಫಾರ್ಗಟೆಬಲ್ ಮೆಮೊರೀಸ್’ ಕೃತಿಯು ಅವರ ಜೀವನದ ಮಜಲುಗಳನ್ನು ತೆರೆದಿಟ್ಟಿದೆ.

ಇಷ್ಟೆಲ್ಲ ವಿಶಿಷ್ಟ ವ್ಯಕ್ತಿತ್ವ ಹೊಂದಿರುವ ಮಮತಾ ದೀದಿಗೆ ಯಾಕೆ ಇಷ್ಟು ಸಿಟ್ಟು ಎಂಬುದಕ್ಕೆ ಅವರ ಜೀವನವೇ ಉತ್ತರವಾಗಿದೆ. ಅವರ ಸಂಘರ್ಷಮಯ ಬದುಕೇ, ಆಕ್ರೋಶಕ್ಕೆ ತಳಪಾಯವಾಗಿದೆ. ಸರಳ ಬದುಕಿಗೆ ಅಲ್ಲಿನ ಜೀವನಶೈಲಿಯ ಪ್ರಭಾವವಿದೆ. ಜೀವನೋತ್ಸಾಹಕ್ಕೆ ಅಲ್ಲಿನ ಮಹನೀಯರ ಸ್ಫೂರ್ತಿ ಇದೆ. ಸಾಹಿತ್ಯ ಸೃಷ್ಟಿಗೆ ಬರಹಗಾರರ ಇತಿಹಾಸದ ಹಿನ್ನೆಲೆ ಇದೆ. ಅಂದ ಹಾಗೆ, ದೀದಿಯ ವಯಸ್ಸು ಬರೀ 71. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65